**ದಿ:28.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ ಎ ಆರ್ ಕೆ ವಕೀಲರಿಂದ:**

1. ನಿಪಿ 1 ವಾದಿಯವರು ನನಗೆ ನೀಡಿರುವ ಜಿ ಪಿ ಎ ಆಗಿರುತ್ತದೆ. ವಾದ ಪತ್ರವನ್ನು ನಿಪಿ 1 ರ ಜೊತೆ ನನಗೆ ನೀಡಿರುವುದರಿಂದ ಷೆಡ್ಯೂಲ್ ನಲ್ಲಿ ಈ ದಾವೆಯ ವಾದ ಪತ್ರದ ಬಗ್ಗೆ ತಿಳಿಸಲಾಗಿದೆ. ನಿಪಿ 1 ಅಪೂರ್ಣವಾದ ದಾಖಲೆಯಾಗಿರುತ್ತದೆ ಎಂದರೆ ಸುಳ್ಳು. ನಾನು ನಿಪಿ 1 ರ ಪ್ರಕಾರ ವಾದಿಯವರ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಇರುವುದಿಲ್ಲ ಎಂದರೆ ಸುಳ್ಳು.

2. ನನ್ನ ಮತ್ತು 2 ನೇ ವಾದಿಯವರ ಮದುವೆಯನ್ನು ಹಿಂದೂ ಮ್ಯಾರೇಜ್ ಆಕ್ಟ್ ಪ್ರಕಾರ ನೊಂದಾಯಿಸಿರುತ್ತೇನೆ ಎಂದರೆ ಸುಳ್ಳು. 1990 ಇಸವಿಯಂದು ನನ್ನ ಮತ್ತು 2 ನೇ ವಾದಿಯವರ ಮದುವೆಯನ್ನು ನಾನು ಬೆಂಗಳೂರಿನ ಶಿವಾಜಿನಗರದಲ್ಲಿರುವ ಸಬ್-ರಿಜಿಸ್ಟರ್ ಕಛೇರಿಯಲ್ಲಿ ನೊಂದಾಯಿಸಿರುತ್ತೇನೆ.

3. ದಾವಾ ಷೆಡ್ಯೂಲ್ ಐಟಮ್ 14 ರಿಂದ 34 ರ ಖಾತೆಯ ಎಕ್ಸ್ಟ್ರಾಕ್ಟ್ ನ್ನು ಹಾಜರುಪಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಐಟಮ್ ನಂ.14 ರಿಂದ 33 ರ ಖಾತೆ ಇರುವುದಿಲ್ಲ, ಆದರೆ ಐಟಮ್ ನಂ.34 ವಾಣಿಜ್ಯ ಕಟ್ಟಡ ಆಗಿರುವುದರಿಂದ ಖಾತೆ ಇದೆ. ದಾವಾ ಷೆಡ್ಯೂಲ್ ಐಟಮ್ ನಂ.16 ಮತ್ತು 17 ನ್ನು ಎಂ ಎ ಹಸನ್ ಎಂಬುವವರಿಗೆ

ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.20 ನ್ನು 2004 ರಲ್ಲಿ ತಾಹಿರ್ ಹುಸ್ಸೇನ್, ಶಬ್ಬಿರ್ ಅಹಮ್ಮದ್ ಹಾಗೂ ಮೊಹಮ್ಮದ್ ಲುಸುಫ್ ಎಂಬುವವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.22 ನ್ನು 2006 ರಲ್ಲಿ ಅಬ್ದುಲ್ ರೆಹಮನ್ ಎಂಬುವವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.23 ನ್ನು 2004 ರಲ್ಲಿ ಎಂ ಎಸ್ ಮೀರಾ ಮೊಯಿದಿನ್ ಎಂಬುವವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.30 ನ್ನು 2014 ರಲ್ಲಿ ಎಂ ಜೆ ಇರ್ಫಾನ್ ಎಂಬುವವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ.32 ನ್ನು 2014 ರಲ್ಲಿ ದಾದಾ ಅಬಿರ್ ಎಂಬುವವರಿಗೆ ಮಾರಾಟ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಎಲ್ಲಾ ದಾವಾ ಷೆಡ್ಯೂಲ್ ಐಟಮ್ಸ್ ಮಾರಾಟ ಆಗಿರುವ ವಿಷಯ ಗೊತ್ತಿದ್ದರೂ ಕೂಡ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಹಾಜೀರಾಬಿ ಸಾಹೇಬ ಎಂಬುವವರು ದಿ:05.08.1999 ರಂದು ಒಂದು ವಿಲ್ ನಾಮೆಯನ್ನು ಮಾಡಿರುತ್ತಾರೆ ಎಂದರೆ ಸುಳ್ಳು. ಹಾಜೀರಾಬಿ ಸಾಹೇಬರವರು ತಮ್ಮ ಜೀವಿತಕಾಲದಲ್ಲಿ ದಾವಾ ಷೆಡ್ಯೂಲ್ ಐಟಮ್ ನಂ.1, 10, 12 ಮತ್ತು 13 ಸ್ವತ್ತುಗಳನ್ನು ಮೌಖಿಕವಾಗಿ ದಾನ ಕೊಟ್ಟಿರುತ್ತಾರೆ ಎಂದರೆ ಸುಳ್ಳು. 2 ನೇ ಪ್ರತಿವಾದಿಯವರು ಮರಣಹೊಂದುವ ಸಮಯದಲ್ಲಿ ಮದುವೆಯಾಗಿರಲಿಲ್ಲ ಎಂದರೆ ಸರಿ. ವಾದಿಯವರು ದಾವೆಯಲ್ಲಿ ಕೇಳಿರುವಷ್ಟು ಹಿಸ್ಸೆಗೆ ಬಾದ್ಯರಾಗಿರುವುದಿಲ್ಲ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಸ್ವತ್ತುಗಳು ವಿಭಾಗಕ್ಕೆ ಸಿಗುವುದಿಲ್ಲ ಎಂದರೆ ಸುಳ್ಳು. ಹಾಜೀರಾಬಿ ಸಾಹೇಬಾ ರವರು ಮಾಡಿರುವಂತಹ ಮರಣಶಾಸನದ ಪ್ರಕಾರ 1/3 ಭಾಗವನ್ನು ಹಂಚಬೇಕಾಗುತ್ತದೆ ಎಂದರೆ ಸುಳ್ಳು.

**ಮರುವಿಚಾರಣೆ: ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ.ಇದೆ.

ಸಹಿ/-
(ಶ್ರೀಮತಿ ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.